ರಾಜಕೋಟ ಅಥವಾ ಪೋರಬಂದರಿನಿಂದ ಬೆಳಿಗ್ಗೆ ಸಹಾಯವೊಂದು ಲಭಿಸುವುದಿತ್ತು, ಆದರೆ ಬಾಪೂ ಅವರು ಅದು ಸಿಗುವುದಿಲ್ಲವೆಂದು ಸ್ಪಷ್ಟ ಪಡಿಸಿದ್ದರು. ಪೋರಬಂದರಿನಲ್ಲಿದ್ದ ಪಿತ್ರಾರ್ಜಿತ ಸಂಪತ್ತಿನ ಬಗ್ಗೆ ಹರಿಲಾಲ ಎಂದೂ ಯೋಚಿಸಿಯೇ ಇರಲಿಲ್ಲ, ಆದರೆ ಆ ಆಸ್ತಿ ಸಹ ನಿಕೃಷ್ಟವಾಗಿರಲಿಲ್ಲ. ಬಾಪೂ ಅವರು ತಮ್ಮ ಸಹೋದರ ಮತ್ತು ಅವರ ಮಕ್ಕಳ ಪರಿವಾರವನ್ನು ತಮ್ಮ ಬಳಿ ಇಟ್ಟುಕೊಂಡಿದ್ದು ಹರಿಲಾಲನಿಗೆ ಇಷ್ಟವಾಗಿರಲಿಲ್ಲ. ಛಗನ್‌ಲಾಲ್ ತನ್ನ ಹಕ್ಕನ್ನು ಕಸಿದಿದ್ದ, ಅವನಿಂದಾಗಿಯೇ ಬಾಪೂ ಅವರು ಹರಿಲಾಲನನ್ನು ವಿದೇಶದ ವಿದ್ಯಾಭ್ಯಾಸಕ್ಕೆ ಕಳುಹಿಸಿರಲಿಲ್ಲ ಎಂಬುದನ್ನು ಅವನೆಂದೂ ಮರೆಯಲು ಸಾಧ್ಯವಾಗುತ್ತಿರಲಿಲ್ಲ. ಬಾಪೂ ತಮ್ಮ ಪಿತ್ರಾರ್ಜಿತ ಸಂಪತ್ತನ್ನು ಅವರಿಗೆ ಕೊಟ್ಟರೆ, ತನಗೆ ಯಾವುದೇ ಲಾಭವಿಲ್ಲ, ಈಗ ಅದು ಸಿಗುವ ಸಾಧ್ಯತೆಯೂ ಇಲ್ಲ ಎಂಬುದು ಸಹ ಹರಿಲಾಲನಿಗೆ ತಿಳಿದಿತ್ತು.

ಹರಿಲಾಲ ನೌಕರಿ ಪಡೆಯಲು ಕಡಿಮೆ ಪ್ರಯತ್ನವನ್ನು ಮಾಡಿರಲಿಲ್ಲ. ಅವನು ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಿದ್ದರೆ ವಿಷಯವೇ ಬೇರೆ ತೆರನಾಗಿರುತ್ತಿತ್ತು. ಆದರೆ ಇದುವರೆಗೆ ಅಂಥದ್ದು ಸಂಭವಿಸಿರಲಿಲ್ಲ. ಬಾಪೂ ಅವನಿಗೆ ಅಲ್ಪಸ್ವಲ್ಪ ಇಂಗ್ಲಿಷ್ ಮತ್ತು ತಕ್ಕಮಟ್ಟಿನ ಗಣಿತವನ್ನು ಕಲಿಸಿದ್ದರು. ಶಾಲೆಯಲ್ಲಿ ಅಲ್ಪಸ್ವಲ್ಪ ವಿದ್ಯಾಭ್ಯಾಸವನ್ನೂ ಸಹ ಮಾಡಿದ್ದ. ಅಲ್ಲದೆ ಚರಿತ್ರೆ ಭೂಗೋಳಗಳೊಂದಿಗೆ, ಫ್ರೆಂಚ್‌ನಂಥ ವಿದೇಶಿ ಭಾಷೆಗಳನ್ನು ಸಹ ಓದಿದ್ದ. ಆದರೆ ಈಗ ಅವೆಲ್ಲವೂ ಅಸ್ತವ್ಯಸ್ತದ ಅವಸ್ಥೆಯಲ್ಲಿದ್ದವು. ಈ ಶಿಕ್ಷಣದಿಂದ ಅವನಿಗೆ ನೌಕರಿ ಸಿಗಲು ಸಾಧ್ಯವಿರಲಿಲ್ಲ. ಅಲ್ಲದೆ ನೌಕರಿಯನ್ನು ಪಡೆಯುವ ಅವನ ಪ್ರಯಾಸಗಳಲ್ಲಿ ಹತಾಶ ಭಾವನೆ ಕಾಡುತ್ತಿತ್ತು. ಖಾಸಗಿ ಅಂಗಡಿಗಳಲ್ಲಿ ಕಡಿಮೆ ವೇತನಕ್ಕೆ ಕೆಲಸ ಮಾಡಲು ಅವನು ಸಿದ್ಧನಾಗಿದ್ದರೂ, ಕೆಲಸ ಕೊಡುವವರು, 'ಹರಿಲಾಲ್! ನಿನ್ನಂಥ ವ್ಯಕ್ತಿಯನ್ನು ಇಂಥ ಕೆಲಸಕ್ಕಿಟ್ಟುಕೊಂಡರೆ, ನಮಗಿರುವ ಮರ್ಯಾದೆಯೂ ಕಡಿಮೆಯಾಗುವುದು. ನೀನು ಎಷ್ಟಾದರೂ ಬಾಪೂ ಅವರ ಮಗ, ಅಷ್ಟು ದೊಡ್ಡ ವ್ಯಕ್ತಿಯ ಮಗನಾಗಿ ಇಷ್ಟು ಕಡಿಮೆ ವೇತನಕ್ಕೆ, ಇಷ್ಟು ಸಣ್ಣ ನೌಕರಿಯನ್ನು ಮಾಡುವುದು, ನಮಗೇ ನಾಚಿಕೆಗೇಡಿನ ವಿಷಯವಾಗುತ್ತದೆ. ಇಲ್ಲಪ್ಪ, ಇಲ್ಲ. ನಿನ್ನನ್ನು ನೌಕರಿಗಿಟ್ಟುಕೊಳ್ಳುವುದು ನಮ್ಮಿಂದಾಗದ ಮಾತು.'

ಇದಕ್ಕೆ ಪ್ರತಿಯಾಗಿ ಬೇರೊಂದು ಜಾಗದಲ್ಲಿ ನೌಕರಿ ಸಿಗುವ ಸಾಧ್ಯತೆ ಕಂಡು ಬರುತ್ತಿತ್ತು; ಹರಿಲಾಲ ಅದಕ್ಕೆ ಪ್ರಯತ್ನಿಸುತ್ತಿದ್ದ, ಆಗ ಕೆಲಸವನ್ನು ಕೊಡುವವನು ನಿಶ್ಚಿತವಾಗಿ ಮೊದಲ ಪ್ರಶ್ನೆಯನ್ನು ಕೇಳುತ್ತಿದ್ದ 'ನೀವು ಮೆಟ್ರಿಕ್ ಪಾಸು ಮಾಡಿದ್ದೀರ? ಇನ್ನೂ ಏನಾದರೂ ಓದಿದ್ದೀರ?'

ಹರಿಲಾಲನ ಬಳಿ ಈ ಪ್ರಶ್ನೆಗಳಿಗೆ ಉತ್ತರವಿರುತ್ತಿರಲಿಲ್ಲ. ಅವನ ಪರಿಸ್ಥಿತಿ ವಿಚಿತ್ರವಾಗಿತ್ತು. ಸಣ್ಣಪುಟ್ಟ ಕೆಲಸ ಮಾಡೋಣವೆಂದರೆ ಅವನು ದೊಡ್ಡ ಮನುಷ್ಯನಾಗಿದ್ದ; ದೊಡ್ಡ ಕೆಲಸಗಳಿಗೆ ಅವನು ಚಿಕ್ಕ ಮನುಷ್ಯನಾಗಿದ್ದ. ಅವನ ಹತಾಶಭಾವನೆ ಹೆಚ್ಚುತ್ತಲೇ ಇತ್ತು.

ಕಡೆಗೆ ತನಗೆ ನೌಕರಿ ಸಿಗುವುದಿಲ್ಲ, ಯಾವುದಾದರು ಸ್ವತಂತ್ರ ಉದ್ಯೋಗವನ್ನು ಮಾಡಿ ನಾಲ್ಕು ಕಾಸು ಸಂಪಾದನೆ ಮಾಡಬೇಕೆಂಬ ಯೋಚನೆಯೂ ಬಂತು. ಅವನು ನಿತ್ಯ ಹತಾಶೆಗೊಳಗಾಗುತ್ತಿದ್ದಾಗ್ಯೂ ಹಣ ಸಂಪಾದನೆ ಮಾಡಿ ಎಲ್ಲರ ನಡುವೆ ಮತ್ತು ಅವರಂತೆ ಉನ್ನತ ಮಟ್ಟದ ಜೀವನವನ್ನು ಸಾಗಿಸಬೇಕೆಂಬ ಅವನಿಚ್ಛೆ ದಿನೇದಿನೇ ದೃಢವಾಗುತ್ತಿತ್ತು. ಈ ಇಚ್ಛೆಯ ಹಿಂದೆ ಬಾಪೂ ಅವರು ಹೇಳಿದ ತ್ಯಾಗ ಮತ್ತು ಸರಳ ಜೀವನದ ಬಗ್ಗೆ ಅವನೊಳಗಿದ್ದ ಅತೃಪ್ತಿಯ ಭಾವನೆ ತನ್ನ ಕೆಲಸವನ್ನು ಮಾಡುತ್ತಿತ್ತು. ತನ್ನ ಮಾರ್ಗ ಬಾಪೂ ಅವರ ಮಾರ್ಗಕ್ಕಿಂತ ಭಿನ್ನವಾಗಿದೆ, ಈ ಬೇರೆ ಮಾರ್ಗದಿಂದ ಅವನು ಬಾಪೂ ಅವರ ಜೀವನಕ್ಕಿಂತ ಬೇರೆ ತೆರನಾದ ಜೀವನವನ್ನು ಸಾಗಿಸಿ, ಸುಖವನ್ನು ಅನುಭವಿಸಬೇಕು, ಮಜ ಮಾಡಬೇಕು ಎಂಬ ಇಚ್ಛೆ ಇದ್ದದ್ದೂ ನಿಜವೇ. ಈ ಇಚ್ಛೆಯನ್ನು ನೌಕರಿಗೆ ಬದಲಾಗಿ ವ್ಯಾಪಾರ ಮಾಡಿ ಹೆಚ್ಚು ಸಹಜವಾಗಿ ಪೂರ್ಣಗೊಳಿಸಬಹುದಿತ್ತು, ಆದರೆ ವ್ಯಾಪಾರ ಮಾಡಲು ಬಂಡವಾಳ ಎಲ್ಲಿತ್ತು? ಹರಿಲಾಲನ ಬಳಿ ಆಗ ಬಿಡಿಗಾಸೂ ಸಹ ಇರಲಿಲ್ಲ. ಮನೆಯ ಖರ್ಚುವೆಚ್ಚಗಳಿಗೆ ನಾಲ್ಕು ಕಾಸು ಕೂಡಿಸಲು ಸಹ ಕಷ್ಟವಾಗಿತ್ತು. ಅಲ್ಲದೆ ವ್ಯಾಪಾರವನ್ನು ಕಲಿಯಲು ಸ್ವಲ್ಪ ಸಮಯವೂ ಬೇಕು, ತರಬೇತಿಯೂ ಬೇಕು. ಅವನಿಗೆ ಈ ತರಬೇತಿಗೆ ಸಮಯವಾದರೂ ಎಲ್ಲಿ ಸಿಗುತ್ತಿತ್ತು?

ಹರಿಲಾಲನ ಚಿಂತೆಗೆ ಕೊನೆಯೇ ಇರಲಿಲ್ಲ. ಚಿಂತೆ ಹೆಚ್ಚುತ್ತಲೇ ಇತ್ತು. ಬಾಪೂ ಅವರ ಬಗ್ಗೆ ಅವನ ಮನಸ್ಸು ರೋಷದಿಂದ ಉರಿಯುತ್ತಿತ್ತು. ಬಾಪೂ ಅವರು ಕೊನೆಯ ಬಾರಿಗೆ ತೆಗೆದುಕೊಂಡ ತೀರ್ಮಾನದಿಂದ ಹರಿಲಾಲ ಕೆಂಡವಾದ. ಬಾಪೂ ಅವರಂತೂ ಹರಿಲಾಲನ ಕಷ್ಟಗಳಿಗೆ ಬೇರೆ ಮಾರ್ಗವನ್ನು ಸೂಚಿಸಲಿಲ್ಲ. ಈ ಸಂಕಟದಿಂದ ಪಾರಾಗಲು ಕೆಲವು ಮಾರ್ಗಗಳಿದ್ದವು; ಅವುಗಳನ್ನು ಸಹ ಬಾಪು ಬಂದ್ ಮಾಡಿದ್ದರು. ತಮ್ಮ ಸಹೋದರರೊಂದಿಗೆ ಆರ್ಥಿಕ ಪರಿಸ್ಥಿತಿಗಳನ್ನು ಮಜಬೂತುಗೊಳಿಸಿ, ತನ್ನ ಸಾರ್ವಜನಿಕ ಜೀವನವನ್ನು ಪೂರ್ಣವಾಗಿ ದೋಷವಿಲ್ಲದಂತೆ ಮಾಡುವ ಅವನ ಪ್ರಯತ್ನಗಳಲ್ಲಿ ಬಾಪೂ ಅವರು ಅಡ್ಡಗಾಲು ಹಾಕಲು ಏನು ಅಧಿಕಾರವಿತ್ತು? ತಂದೆಮಗನ ಮಧ್ಯೆ ಮನಸ್ತಾಪವುಂಟಾಗಿದೆ, ಹರಿಲಾಲ ಬಾಪೂ ಅವರ ಮನೆಯನ್ನು ತ್ಯಜಿಸಿದ್ದಾನೆ ಎಂಬುದು ಜನರಿಗೆ ಅಲ್ಪಸ್ವಲ್ಪ ತಿಳಿದಿತ್ತು. ಈಗ ಬಾಪೂ ಅವರು ಸಹಾಯದ ಈ ಕೊನೆಯ ನೂಲನ್ನು ಸಹ ಕತ್ತರಿಸಿದ್ದಾರೆ ಎಂದರೆ, ಇದಕ್ಕೆ ಹರಿಲಾಲನೇ ಕಾರಣ ಎಂದು ಜನರು ತಿಳಿಯುತ್ತಾರೆ.

ಮತ್ತೆ ಹರಿಲಾಲ ಮಾತ್ರವೇ ಯಾಕೆ? ಬಾಪೂ ಅವರು ಇನ್ನಿತರ ಮಕ್ಕಳ ಬಗ್ಗೆ ಎಂದಾದರು ಯೋಚಿಸಿರುವರೇ? ಅವರು ಎಂದಾದರೂ ಅವರ ಹಿತದ ಬಗ್ಗೆ ಅಥವಾ ಭವಿಷ್ಯದ ಬಗ್ಗೆ ಗಮನವನ್ನು ಕೊಟ್ಟಿದ್ದಾರೆಯೇ? ಎಲ್ಲರೂ ತಮ್ಮ ಮಾರ್ಗದಲ್ಲಿ ಮಾತ್ರ ಸಾಗಬೇಕೆಂದು ಬಾಪೂ ಅವರು ಸದಾ ಆಗ್ರಹಿಸಿದರು.

ಆ ಮಾರ್ಗದಲ್ಲಿ ಸಾಗುವ ದಿಶೆಯಲಿ ಬಾ ಮತ್ತು ಸಹೋದರರ ಭಾವನೆಗಳ ಬಗ್ಗೆ ಬಾಪೂ ಎಂದು ಯೋಚಿಸಿದ್ದರು? ಇಡೀ ದೇಶದಲ್ಲಿ ಮತ್ತು ವಿದೇಶದಲ್ಲಿ ವಾಸಿಸುವ ಭಾರತೀಯರು, ಎಲ್ಲರೂ ಬಾಪೂ ಅವರ ಮಾತನ್ನು ಕೇಳುತ್ತಾರೆ, ಬಾಪೂ ಅವರ ಜೀವನದ ಈ ಮಗ್ಗುಲನ್ನು ಎಲ್ಲರೂ ಬಲ್ಲರು. ಆದರೆ ಈ ಶ್ವೇತ ಪರದೆಗೆ ಪ್ರತಿಯಾಗಿ ತನ್ನೊಂದಿಗೆ ಆಗಿರುವ ಅನ್ಯಾಯ ಹಾಗೂ ಬಾಪೂ ಅವರು ತಮಗೆ ಗೊತ್ತಿದ್ದೂ ಸಹ ಬಾ ಮತ್ತು ಸಹೋದರರೊಂದಿಗೆ ಮಾಡಿರುವ ಅನ್ಯಾಯವನ್ನು ಜಗತ್ತಿನೆದುರು ತಿಳಿಯಪಡಿಸಬೇಕು ಎಂದು ಹರಿಲಾಲನಿಗೆ ಅನ್ನಿಸಿತು. ಒಂದು ವೇಳೆ ತನ್ನ ವಾಸ್ತವಿಕತೆ ಮತ್ತು ಸತ್ಯವನ್ನು ಜಗತ್ತಿನೆದುರು ಪ್ರಸ್ತುತಪಡಿಸದಿದ್ದರೆ, ತಾನು ಹೇಡಿಯಾಗುತ್ತೇನೆ ಎಂದು ಅವನಿಗೆ ಅನ್ನಿಸಿತು. ತಾನು ಯಾವುದನ್ನು ಸತ್ಯವೆಂದು ತಿಳಿಯುತ್ತೇನೋ, ಅದು ಬಾಪೂ ಅವರಿಗೆ ವಿರುದ್ಧವಾದರೂ, ಅದನ್ನು ಜಗತ್ತಿನೆದುರು ಹಾಜರುಪಡಿಸುವುದು ತನ್ನ ಕರ್ತವ್ಯ. ಬಾಪೂ ಅವರೇ ಅವನಿಗೆ ಸತ್ಯದ ಆಚರಣೆ ಮತ್ತು ನಿರ್ಭಯದ ಪಾಠವನ್ನು ಬೋಧಿಸಿದ್ದಾರೆ. ಒಂದು ವೇಳೆ ತಾನು ಅವರು ಕಲಿಸಿದ ಪಾಠವನ್ನು ಕಾರ್ಯರೂಪಕ್ಕೆ ತರದಿದ್ದರೆ, ತನ್ನಂಥ ದುರ್ಬಲ ವ್ಯಕ್ತಿ ಬೇರೆ ಯಾರಿರಲು ಸಾಧ್ಯ? ಮನಸ್ತಾಪದ ವಿಷಯಗಳ ಬಗ್ಗೆ ಬಾಪೂ ಅವರೊಂದಿಗೆ ಮುಖಾಮುಖಿಯಾಗಿ ಈ ಮೊದಲೇ ಚರ್ಚೆಗಳಾಗಿದ್ದವು. ಪತ್ರದ ಮೂಲಕ ಮತ್ತೊಮ್ಮೆ ಬಾಪೂ ಅವರೆದುರು ತನ್ನ ಭಾವನೆಗಳನ್ನು ಬಿಚ್ಚಿಡುವುದರಲ್ಲಿ ಯಾವುದೇ ಹಾನಿಯಿಲ್ಲ ಎಂದು ಹರಿಲಾಲನಿಗೆ ಅನ್ನಿಸಿತು. ಇದುವರೆಗೆ ಅವನೇನು ಹೇಳಬೇಕಿತ್ತೋ, ಅದನ್ನು ಬಾಪೂ ಅವರಿಗೆ ಅನ್ವಯಿಸಿ ಹೇಳುತ್ತಿದ್ದ, ಆದರೆ ಎಲ್ಲರ ತಿಳಿವಳಿಕೆಗಾಗಿ ತನ್ನ ಭಾವನೆಯನ್ನು ಹೇಳಲು ಈಗ ಅವನಿಗೆ ಸಾರ್ವಜನಿಕವಾಗಿ ವ್ಯಕ್ತಪಡಿಸುವ ಮಾರ್ಗವೊಂದೇ ಉಳಿದಿತ್ತು. ಬಹಳಷ್ಟು ಯೋಚಿಸಿದ ನಂತರ ಅವನು ಬಾಪೂ ಅವರಿಗೆ ಸಂಬೋಧಿಸಿ ಒಂದು ಸಾರ್ವಜನಿಕ ಪತ್ರವನ್ನು ಬರೆಯುವ ಬಗ್ಗೆ ತೀರ್ಮಾನಿಸಿದ. ರಾತ್ರಿಯಿಡಿ ಎಚ್ಚೆತ್ತು ತನ್ನ ರೋಷ ಮತ್ತು ಹತಾಶ ಭಾವನೆಗಳಿಗೆ ಶಬ್ದದ ರೂಪವನ್ನು ಕೊಟ್ಟ.

'ಪೂಜ್ಯ ತಂದೆಯವರಿಗೆ,

ಕೀಟವೊಂದು ದುಂಬಿಯ ಸಂಪರ್ಕಕ್ಕೆ ಬಂದು ದುಂಬಿಯಾಗಿ ಹಾರಿ ಹೋಗುವಂತೆ, ನಾನು ಸಹ ನನ್ನ ಬಗ್ಗೆ ಹೀಗೆಯೇ ತಿಳಿದು ಸಾಗುತ್ತಿದ್ದೇನೆ. ನಿಮ್ಮಿಂದ ನಾನು ಸಾಕಷ್ಟು ಪಡೆದಿದ್ದೇನೆ, ಬೇಕಾದಷ್ಟು ಕಲಿತಿದ್ದೇನೆ, ಬೇಕಾದಷ್ಟು ಅನುಭವವನ್ನು ಪಡೆದಿದ್ದೇನೆ, ನನ್ನ ಚಾರಿತ್ರ್ಯದಲ್ಲೂ ಯಾವುದೇ ಕೊರತೆಯಿಲ್ಲ. ಆದರೆ ನನ್ನಲ್ಲಿ ಕೀಟಕ್ಕಿರುವ ತಾಳ್ಮೆ ಇರಲಿಲ್ಲ, ಅದಕ್ಕೇ ನನ್ನ ಅದೃಷ್ಟದಲ್ಲಿ ದುಂಬಿಯಾಗುವುದು ಬರೆದಿರಲಿಲ್ಲ.

ನಿಮ್ಮ ಅನುಮತಿಯಿಂದ ನನ್ನ ಅಂತಃಕರಣವನ್ನು ಗೌರವಿಸುತ್ತಾ ನಾನು ನಿಮ್ಮಿಂದ ದೂರವಾದೆ.